

ಪುಂಗಿಗೆ ತಕ್ಕಂತೆ ಹೆಡೆಯಾಡಿಸುವ ಶಿಷ್ಯನೂ ಆಗಿದ್ದ. ಪಕ್ಷಿ ಜ್ಞಾನದಲ್ಲಿ ಇಬ್ಬರೂ ಪರಸ್ಪರ ಕಲಿಯುವ ಆಸಕ್ತಿ ಇಟ್ಟುಕೊಂಡ ವಿದ್ಯಾರ್ಥಿಗಳಂತೆ ಇದ್ದರು. ಒಮ್ಮೊಮ್ಮೆ ಇಬ್ಬರೇ ನಮಗರ್ಥವಾಗದ ಅನೇಕ ವಿಷಯಗಳ ಚರ್ಚಿಸುತ್ತಿದ್ದರು.

ನಮ್ಮಂತೆ ಬರುವ ಅನೇಕ ಪಟಗಾರರಿಗೆ ಸಾರಸ್ ಎಂಬ ಅಪರೂಪದ ಪಕ್ಷಿಯನ್ನು ತೋರಿಸುವ ಇವನಿಗೆ ಸಾರಸ್‌ಗಳ ಇರುವಿಕೆಯ ತಾಣದ ಅಂದಾಜು ಇದ್ದಿರಬಹುದು. ಸುಮಾರು ಹೊತ್ತಿನ ಪ್ರಯಾಣದ ನಂತರ ಅವನು ಒಂದು ಹಳ್ಳಿಯನ್ನು ದಾಟಿಸಿ ರಸ್ತೆಯ ಬದಿ ಕಾರು ನಿಲ್ಲಿಸಿದ. ಅದು ಗೋಧಿ ಹೊಲ. ಬಿಳಿ ಮಂಜಿನ ನಡುವೆ ಹಸಿರು ತೆನೆಗಳ ಚೆಲುವು ಬುದ್ಧನ ನಗುಮುಖವನ್ನು ನೆನಪಿಸುತ್ತಿದ್ದವು. ಎತ್ತರದ ಕುತ್ತಿಗೆಯ ಸಾರಸ್‌ಗಳು ಹೊಲಗಳ ನಡುವೆ ಇರುವುದನ್ನು ಅವನು ಪತ್ತೆ ಹಚ್ಚಿದ್ದ. ಅವು ನಮ್ಮತ್ತ ತಾವಾಗಿಯೇ ನಡೆದು ಬರುವ ತನಕ ನಿರೀಕ್ಷೆ ಮಾಡಬೇಕಿತ್ತು. ಮೂರ್ತಿಗಳು, 'ಇಲ್ಲೇ ಕೆಳಗಿಳಿದು ಕೂತು ಟ್ರೈಪಾಡು ಹಾಕಿಕೊಂಡು ಸೆಟಲ್ ಆಗೋಣ' ಎಂದು ಸಣ್ಣ ದನಿಯಲ್ಲಿ ಸೂಚಿಸಿದರು. ಹೊಸ ಮನುಷ್ಯರ ತಲೆ ಕಂಡರೆ ಅವು ಹೆದರಿ ಹಾರಬಹುದೆಂದು ನಾವು ಕಳ್ಳರಂತೆ ತಲೆ ಬಗ್ಗಿಸಿ ಕೂತು ಬಿಟ್ಟೆವು.

ಹೊಲಗಳಲ್ಲಿ ಕಳೆ ಕೀಳುತ್ತಾ, ಬೆಳೆಗಳ ನಿಗಾ ನೋಡುವ ರೈತರು ತೀರಾ ಹತ್ತಿರದಲ್ಲಿದ್ದರೂ ಸಾರಸ್‌ಗಳು ಹೆದರದೆ ಧೈರ್ಯವಾಗಿರುವುದು ಅಚ್ಚರಿ ಎನಿಸಿತು. ದಿನಾ ಓಡಾಡುವ ರೈತರಿಂದ ಏನೂ ಅಪಾಯವಿಲ್ಲ ಎಂದು ಅವಕ್ಕೆ ಖಾತ್ರಿಯಾಗಿದೆ. ಸ್ಥಳೀಯರ ವೇಷಭೂಷಣ ಮತ್ತು ಅವರ ಓಡಾಟಗಳನ್ನು ಸತತ ಗಮನಿಸಿರುವ ಹಕ್ಕಿಗಳು ಇವರನ್ನು ಮಾನ್ಯ ಮಾಡಿದ್ದವು. ನಾವು ಎಣಿಸಿದಂತೆಯೇ ಎರಡು ಸಾರಸ್ ಹಕ್ಕಿಗಳು ಹೊಲದ ಬದಿಗೆ ನಮ್ಮತ್ತ ಮುಖ ಮಾಡಿ ಬಂದವು. ನಾವು ನಿಶ್ಚಲವಾಗಿ ಕೂತಿದ್ದು ಫಲ ಕೊಟ್ಟಿತು. ಸಾಕಷ್ಟು ಪಟಗಳ ತೆಗೆದೆವು. ಅವು ಹಾಡುತ್ತಾ, ಸಣ್ಣಗೆ ರೆಕ್ಕೆ ಬಿಚ್ಚಿ ಕುಣಿಯುತ್ತಾ, ಆಕಾಶದ ಕಡೆಗೆ ಮುಖ ಮಾಡಿ ಉಲಿಯುವ ದೃಶ್ಯವನ್ನು ಕಣ್ಣಾರೆ ನೋಡಬೇಕಿತ್ತು. ಈ ಹಕ್ಕಿಯ ಒಲವು, ಚೆಲುವು, ಇರುವುದೇ ಈ ಮೋಡಿಯ ಭಂಗಿಯಲ್ಲಿ. ಆಕಾಶಕ್ಕೆ ಮುಖ ಮಾಡಿ ಪ್ರಕೃತಿ ಮಾತೆಗೆ ಬಿನ್ನವಿಸಿಕೊಳ್ಳುವ ಈ ಸನ್ನಿವೇಶ ಮೈಮನಸ್ಸಿಗೆ ರೋಮಾಂಚನ ಕೊಡುತ್ತದೆ. ಇದಕ್ಕಾಗಿ ಅನೇಕ ದಿನಗಳು ಅದರ ಬೆನ್ನು ಬಿದ್ದು ಕಾಲ ಕಳೆಯಬೇಕೆಂಬ ಹೇಳಿದ ಲೋಕೇಶ, 'ಎಲ್ಲವೂ ನಿಮ್ಮ ಅದೃಷ್ಟ ಸರ್' ಎಂದು ನಕ್ಕ.

ಅದೇನಾಯಿತೆಂದರೆ ಸಾರಸ್ ಫೋಟೊ ತೆಗೆಯುತ್ತಾ, ಅಲೆಮಾರಿಗಳಾಗಿ ಹೊರಟ ನಾವು ರಾಜಸ್ಥಾನದಿಂದ ಹೊರಟವರು ಉತ್ತರ ಪ್ರದೇಶದ